I, Sangeeta Fakira Gudaji, R/o, H.No.209, Laxmi Galli Mannikeri, Post-Kednur T & D Belagavi. My husband Name Fakira Gudaji Army No-15205013X Rank NK (Gnr). Have Changed Son **Manthan** to **MANTHAN FAKIRA GUDAJI** And daughter **Priya Fakira Gudaji** to **PRIYA GUDAJI** vide affidavit dated 26.08.2020 sworn before advocate & Notary S. K. Lad, Belagavi.

Sd/-
**Sangeeta Fakira Gudaji**

ಕಿತ್ತೂರ ಭಾಗದಲ್ಲಿ ನೀರಾವರಿ ಯೋಜನೆ ಜಾರಿ ಕುರಿತು ಎಷ್ಟೇ ಕಷ್ಟ ಸಂದರ್ಭಗಳು ಎದುರಾದರೂ ಅವುಗಳನ್ನು ಮೆಟ್ಟಿ ನಿಲ್ಲುವ ಮೂಲಕ ಕ್ಷೇತ್ರದ ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯಗಳು ನಡೆಯಬೇಕಿದ್ದು, ಇದಕ್ಕೆ ಜನರ ಸಹಕಾರ ಮುಖ್ಯ.

• **ಮಹಾಂತೇಶ ದೊಡಗೌಡರ** ಶಾಸಕ.



## ಸಣ್ ಸುದ್ದಿ

### ಜಿಲ್ಲೆಯಲ್ಲಿ 290 ಕೊರೋನಾ ದೃಢ

**ಬೆಳಗಾವಿ:** ಜಿಲ್ಲೆಯಲ್ಲಿ ಮಹಾಮಾರಿ ಕೊರೋನಾ ಆರ್ಭಟ ಮುಂದುವರೆದಿದ್ದು, ಶುಕ್ರವಾರ ಒಂದೇ ದಿನ 290 ಕೊರೋನಾ ಹೊಸ ಪಾಸಿಟಿವ್ ಪ್ರಕರಣ ದೃಢಪಟ್ಟಿವೆ. ಇದರೊಂದಿಗೆ ಜಿಲ್ಲೆಯಲ್ಲಿ ಸೋಂಕಿತರ ಸಂಖ್ಯೆ 11443ಕ್ಕೇರಿದಂತಾಗಿದೆ. ಮತ್ತೆ ನಾಲ್ವರು ಸೋಂಕಿಗೆ ಬಲಿಯಾಗಿದ್ದು, ಸೋಂಕಿನಿಂದ ಮೃತಪಟ್ಟವರ ಸಂಖ್ಯೆ 177ಕ್ಕೇರಿದೆ. ಶುಕ್ರವಾರ 789 ಜನರು ಸೋಂಕಿನಿಂದ ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ. ಈವರೆಗೆ ಒಟ್ಟು 7334 ಜನರು ಸೋಂಕಿನಿಂದ ಸಂಪೂರ್ಣವಾಗಿ ಗುಣಮುಖರಾಗಿ ಆಸ್ಪತ್ರೆಯಿಂದಬಿಡುಗಡೆಯಾಗಿದ್ದಾರೆ. ಇನ್ನೂ 3932 ಪ್ರಕರಣ ಸಕ್ರಿಯವಾಗಿವೆ.

### ವಿಮಾನ ಇಳಿದು ಬಂದು ಅಧಿಕಾರ ಕೇಳಬೇಡಿ

**ಧಾರವಾಡ:** ನಾನು ಎಂಎಲ್ಎ ಆಗಿದ್ದೆ, ಪಕ್ಷದಲ್ಲಿ ನನಗೆ ಹೆಚ್ಚಿನ ಅವಕಾಶಗಳಿವೆ ಎಂದು ಹೇಳಿಕೊಳ್ಳುವ ಬದಲು ತಳಮಟ್ಟದಲ್ಲಿ ಪಕ್ಷ ಸಂಘಟನೆ ಮಾಡಿದರೆ ಮಾತ್ರ ಪಕ್ಷದಲ್ಲಿ ಅವಕಾಶ. ವಿಮಾನದಿಂದ



ನೇರವಾಗಿ ಇಳಿದು ಬಂದು ಟಿಕೆಟ್ ಕೊಡಿ ಎಂದರೆ ಅಂತಹವರನ್ನು ಪಕ್ಷ ಸಹಿಸೋದಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಕಡ್ಡಿ ಮುರಿದಂತೆ ಹೇಳಿದ್ದಾರೆ. ಇಲ್ಲಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಬೆಳಗಾವಿ ವಿಭಾಗ ಮಟ್ಟದ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಪಕ್ಷದಲ್ಲಿ ಯಾರೂ ದೊಡ್ಡವರಲ್ಲ. ಬರೀ ಪಕ್ಷದಿಂದ ಲಾಭದ ಮಾತು ಬಿಟ್ಟು ಪಕ್ಷ ಬೆಳೆಸಲು ಏನೆಲ್ಲಾ ಕೆಲಸ-ಕಾರ್ಯಗಳನ್ನು ಮಾಡಿದ್ದೀರಿ ಎಂಬುದನ್ನು ತಮ್ಮ-ತಮ್ಮ ಮನಸುಗಳಿಗೆ ಕೇಳಿಕೊಳ್ಳಿ. ಶಾಸಕರಾಗಲಿ, ಮಾಜಿ ಶಾಸಕರಾಗಲಿ, ಪಕ್ಷದ ಉತ್ತಮ ಹುದ್ದೆಯಲ್ಲಿರಲಿ, ಪಕ್ಷ ಸಂಘಟನೆಗೆ ತಳಮಟ್ಟದಲ್ಲಿ ಕಾರ್ಯ ಮಾಡಲೇಬೇಕು. ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಇತಿಹಾಸವಿದ್ದು ಅದನ್ನು ಮುಂದುವರಿಸಿಕೊಂಡು ಹೋಗುವ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕಿದೆ ಎಂದರು.

ಪಕ್ಷದಲ್ಲಿ ಜಾತಿ-ಮತ ಎನ್ನದೇ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಧಾರವಾಡ ಜಿಲ್ಲೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಪಕ್ಷದ ಮುಖಂಡರಲ್ಲಿಯೇ ಒಳಗೊಳಗೆ ಬೇಗುದಿಗಳಿವೆ. ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುತ್ತಿಲ್ಲ. ಇದರ ಲಾಭವನ್ನು ಬಿಜೆಪಿ ತೆಗೆದುಕೊಳ್ಳುತ್ತಿದೆ. ಹೀಗಾಗಿ ಪಕ್ಷ ಒಡೆಯುವ ಕೆಲಸ ಮಾಡದೇ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಪಕ್ಷ ಒಡೆಯುವ ಕೆಲಸ ಮಾಡಿದರೆ ಅಂತಹವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ವಿಪ ಪ್ರತಿಪಕ್ಷದ ನಾಯಕ ಎಸ್.ಆರ್.ಪಾಟೀಲ ಮಾತನಾಡಿ, ಜಿಲ್ಲಾಧ್ಯಕ್ಷರು, ಬ್ಲಾಕ್ ಅಧ್ಯಕ್ಷರು ಹಾಗೂ ಪಕ್ಷಗಳ ಮುಖಂಡರು ಆಗಾಗ ಸಭೆ ಸೇರಿ ಪಕ್ಷ ಸಂಘಟನೆ ಬಗ್ಗೆ ಚರ್ಚೆ ಮಾಡಿಕೊಳ್ಳಿ. ಆರೋಗ್ಯ ಹಸ್ತ ಕಾರ್ಯಕ್ರಮವನ್ನು ಎಲ್ಲರಿಗೂ ಮುಟ್ಟಿಸುವಲ್ಲಿ ಶ್ರಮ ವಹಿಸಿ ಎಂದರು. ಮಾಜಿ ಸಚಿವರಾದ ಉಮಾಶ್ರೀ, ವೀರಕುಮಾರ ಪಾಟೀಲ, ಶಾಸಕರಾದ ಲಕ್ಷ್ಮಿ ಹೆಬ್ಬಾಳಕರ, ಅಂಜಲಿ ನಿಂಬಾಳ್ಕರ್ ಸೇರಿದಂತೆ ಬೆಳಗಾವಿ, ಬಾಗಲಕೋಟೆ, ವಿಜಯಪೂರ ಜಿಲ್ಲೆಗಳ ಪದಾಧಿಕಾರಿಗಳು ಇದ್ದರು.


## ರವೀಂದ್ರ ಎನರ್ಜಿ ಲಿಮಿಟೆಡ್

(ಹಿಂದಿನ ರವೀಂದ್ರ ಟ್ರೇಡಿಂಗ್ ಅಂಡ್ ಏಜೆನ್ಸಿಸ್ ಲಿಮಿಟೆಡ್)

**CIN**: L40104KA1980PLC075720

**ನೋಂದಾಯಿತ ಕಛೇರಿ :** ಬಿಸಿ 109, ಡೇವಿಡ್‌ಸನ್ ರಸ್ತೆ, ಕ್ಯಾಂಪ್, ಬೆಳಗಾವಿ-590001, ಕರ್ನಾಟಕ ಭಾರತ.

**ದೂ:** +91-831-2406600 **ವೆಬ್‌ಸೈಟ್ :** www.ravindraenergy.com

**ವಿಸಿ/ಓಎವಿಎಂ ಮೂಲಕ ನಡೆಯಬೇಕಾದ ವಾರ್ಷಿಕ ಮಹಾಸಭೆಯ ಸೂಚನೆ ಪುಸ್ತಕ-ಮುಚ್ಚುವಿಕೆ ಮತ್ತು ಇ-ಮತದಾನದ ಮಾಹಿತಿ**

ಸೂಚನೆ ನೀಡುವುದೇನೆಂದರೇ:

1. ಕಂಪನಿಯ 40ನೇ ವಾರ್ಷಿಕ ಮಹಾಸಭೆಯು (''ಎಜಿಎಂ'') ವಿಡಿಯೋ ಸಮಾವೇಶ (''ವಿಸಿ'') ಇತರೆ ದೃಶ್ಯ ಶ್ರವಣ ಮಾಧ್ಯಮದ ಮೂಲಕ 2020 ಸೆಪ್ಟೆಂಬರ್ 19ರ ಶನಿವಾರ ಮಧ್ಯಾಹ್ನ 3.00ಕ್ಕೆ ನಡೆಸಲಾಗುವುದು. ಸದರಿ ಮಹಾಸಭೆಯನ್ನು 2013ರ ಕಂಪನಿಗಳ ಕಾಯಿದೆಯ ಕಟ್ಟಳೆಗಳ ಮತ್ತು ತದನಂತರದ ನಿಯಮಗಳು ಹಾಗೂ 2015ರ ಸೆಬಿ (ಪಟ್ಟಿ ಮಾಡುವಿಕೆ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಂತ್ರಣಗಳು ಜೊತೆಜೊತೆಗೆ ಓದಿಕೊಳ್ಳಬೇಕಾದ ಏಪ್ರಿಲ್ 08, 2020ರ ಸಾಮಾನ್ಯ ಸುತ್ತೋಲೆ ಸಂ. 14/2020, ಏಪ್ರಿಲ್ 13, 2020ರ ಸಾಮಾನ್ಯ ಸುತ್ತೋಲೆ ಸಂ. 17/2020 ಮತ್ತು ಮೇ 5ರ, 2020ರ ಸಾಮಾನ್ಯ ಸುತ್ತೋಲೆ ಸಂ. 20/2020 ಹಾಗೂ ಕಾರ್ಪೋರೇಟ್ ವ್ಯವಹಾರಗಳ ಮಂತ್ರಾಲಯ (''ಎಂಸಿಎ'') ಹಾಗೂ ಸೆಬಿ (ಇನ್ನು ಮುಂದೆ ಸಂಗ್ರಹಿತವಾಗಿ ''ಸಂಗತ ಸುತ್ತೋಲೆಗಳೆಂಬುದಾಗಿ ಉಲ್ಲೇಖಿಸಲ್ಪಡುವುದು'')ಗಳ ಅನ್ವಯಿತ ಸುತ್ತೋಲೆಗಳಂತೆ ಆಯೋಜಿಸಲಾಗಿದ್ದು, ಸಭೆಯಲ್ಲಿ, ಎಜಿಎಂ ಸೂಚನೆಯಲ್ಲಿ ತಿಳಿಸಿರುವ ವಿಷಯಗಳನ್ನು ವ್ಯವಹರಿಸಲಾಗುವುದು. ವಿಸಿ/ಓಎವಿಎಂ ಮೂಲಕ ಮಾತ್ರ ಎಜಿಎಂಗೆ ಹಾಜರಾಗಲು ಸದಸ್ಯರಿಗೆ ಸಾಧ್ಯವಾಗುತ್ತದೆ. ಅಥವಾ https://emeetings.kfintech.comನ ನೇರ ವೆಬ್‌ಕಾಸ್ಟ್ ನೋಡಬಹುದಾಗಿರುತ್ತದೆ. ವಿಸಿ/ಓಎವಿಎಂ ಸೌಲಭ್ಯದ ಮೂಲಕ ಭಾಗವಹಿಸುವ ಸದಸ್ಯರನ್ನು 2013ರ ಕಂಪನಿಗಳ ಕಾಯಿದೆಯ ಕಲಂ 103ರಡಿ ಕೋರಂ ಉದ್ದೇಶಕ್ಕಾಗಿ ಲೆಕ್ಕಹಾಕಲಾಗುವುದು. ಎಜಿಎಂಗೆ ಸೇರಿಕೊಳ್ಳಲು ಸೂಚನೆಗಳನ್ನು ಮತ್ತು ಅದೃಶ್ಯ ಇ-ಮತದಾನದ/ ವಿದ್ಯುನ್ಮಾನದ ಮತದಾನದ ರೀತಿ ನೀತಿಗಳನ್ನು ಎಜಿಎಂನ ಸೂಚನೆಯಲ್ಲಿ ಒದಗಿಸಲಾಗಿದೆ.
2. ಸಂಬಂಧಿಸಿದ ಸುತ್ತೋಲೆಗಳನ್ವಯ ಎಜಿಎಂನ ಸೂಚನೆಯನ್ನು ಮತ್ತು 2019-20ರ ಹಣಕಾಸು ವರ್ಷದ ಸ್ವಸಾಮರ್ಥ್ಯದ ಹಾಗೂ ಸಮಗ್ರಿತ ಹಣಕಾಸು ಪಟ್ಟಿಗಳನ್ನು ಜೊತೆಗೆ ನಿರ್ದೇಶಕ ಮಂಡಳಿಯ ವರದಿ, ಕಾರ್ಪೋರೇಟ್ ಆಡಳಿತ ವರದಿ, ವ್ಯಾಪಾರ ಜವಾಬ್ದಾರಿ ವರದಿ, ಪರಿಶೋಧಕರ ವರದಿ ಹಾಗೂ ಲಗತ್ತಿಸಬೇಕಾದ ಮತ್ತಿತರ ದಾಖಲೆಗಳೊಂದಿಗೆ ಎಲ್ಲಾ ಸದಸ್ಯರಿಗೆ, ಯಾರ ಇ-ಮೇಲ್ ವಿಳಾಸಗಳನ್ನು ಕಂಪನಿ/ ನಿಕ್ಷೇಪ ಭಾಗೀದಾರ(ರು)ಗಳೊಂದಿಗೆ/ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟ್‌ರೊಂದಿಗೆ ನೋಂದಾವಣೆ ಮಾಡಿಯಾಗಿದೆಯೋ ಅಂತಹವರಿಗೆ ವಿದ್ಯುನ್ಮಾನದ ಮೂಲಕ ಕಳುಹಿಸಲಾಗುವುದು. ಎಂಸಿಎ ಮತ್ತು ಸೆಬಿ ಸುತ್ತೋಲೆಗಳಂತೆ ಸದರಿ ದಾಖಲೆಗಳ ಭೌತಿಕ ರವಾನೆಯ ಅವಶ್ಯಕತೆಯನ್ನು ಪೂರ್ಣಗೊಳಿಸಲಾಗಿದೆ. ಸೂಚನೆ ಮತ್ತು ವಾರ್ಷಿಕ ವರದಿಗಳ ರವಾನೆಯನ್ನು ಆಗಸ್ಟ್ 27, 2020ರಂದು ಪೂರ್ಣಗೊಳಿಸಲಾಗಿದೆ.
3. 2013ರ ಕಂಪನಿಗಳ ಕಾಯಿದೆಯ ಕಲಂ 91ರ ಅನ್ವಯ ಹಾಗೂ ಇದರಡಿಯ ನಿಯಮಗಳು ತದನಂತರದ ಕಟ್ಟಳೆಗಳಂತೆ ಏನಾದರೂ ಇದ್ದರೆ ಅವುಗಳಂತೆ ಹಾಗೂ ಏನಾದರೂ ಇದ್ದಲ್ಲಿ ಸೆಬಿಯ ಲಿಸ್ಟಿಂಗ್ ನಿಯಂತ್ರಣಗಳಂತೆ ಸದಸ್ಯರುಗಳ ರಿಜಿಸ್ಟರ್ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಸೆಪ್ಟೆಂಬರ್ 12, 2020ರ ಶನಿವಾರದಿಂದ ಸೆಪ್ಟೆಂಬರ್ 19, 2020ರ ಶನಿವಾರದವರೆಗೂ (ಎರಡು ದಿನಗಳೂ ಸೇರಿದಂತೆ) ಮುಚ್ಚಲಾಗಿರುತ್ತದೆ.
4. 2013ರ ಕಂಪನಿಗಳ ಕಾಯಿದೆಯ ಕಲಂ 108ರ ಅನ್ವಯ ಹಾಗೂ ಕಂಪನಿಗಳ (ವ್ಯವಸ್ಥಾಪನೆ ಮತ್ತು ಆಡಳಿತ) ನಿಯಮಗಳು 2014ರ ನಿಯಮಗಳ ನಿಯಮ 20ರರೊಂದಿಗೆ ಓದಿಕೊಂಡಂತೆ, ಸೆಬಿ ಲಿಸ್ಟಿಂಗ್ ನಿಯಂತ್ರಣಗಳ ನಿಯಂತ್ರಣ 44ರಂತೆ ಕಂಪನಿಯು ತನ್ನ ಸದಸ್ಯರಿಗೆ ವಿದ್ಯುನ್ಮಾನ ಮತದಾನ (ರಿಮೋಟ್ ಇ-ವೋಟಿಂಗ್) ಸೌಲಭ್ಯವನ್ನು ಒದಗಿಸುತ್ತದೆ ಎಂದು ತಿಳಿಸಲು ಹರ್ಷಿಸುತ್ತದೆ. ಕಂಪನಿಯು ಎಜಿಎಂ ನಡೆಯುವಾಗಲೂ ಅದೃಶ್ಯ ಮತದಾನದ ಮೂಲಕ ಮತದಾನ ಮಾಡದ ತನ್ನ ಸದಸ್ಯರಿಗೆ ತಮ್ಮ ಇ-ಮತದಾನ ಮಾಡುವ ಸೌಲಭ್ಯವನ್ನು ಸಹ ಒದಗಿಸುತ್ತದೆ.
5. **ಇ-ಮತದಾನ/ ವಿದ್ಯುನ್ಮಾನ ಮತದಾನದಲ್ಲಿ ಮತವ (ಗಳ)ನ್ನು ಮಾಡಲು ಅನುಸರಿಸಬೇಕಾದ ರೀತಿ ನೀತಿಗಳು**

(ಎ) ಸದಸ್ಯರು ಎಜಿಎಂನ ಸೂಚನೆಯಲ್ಲಿ ತಿಳಿಸಲಾದ ವಿಷಯಗಳಿಗೆ ಅದೃಶ್ಯ ಇ-ಮತದಾನ ಅಥವಾ ವಿದ್ಯುನ್ಮಾನದ ಮೂಲಕ ಎಜಿಎಂನಲ್ಲಿ ತಮ್ಮ ಮತವ(ಗಳ)ನ್ನು ಹಾಕುವ ಅವಕಾಶ ಪಡೆಯುತ್ತಾರೆ.

(ಬಿ) ಅಭೌತಿಕ ರೀತಿಯಲ್ಲಿ ಷೇರು ಹೊಂದಿರುವ, ಭೌತಿಕ ರೀತಿಯಲ್ಲಿ ಷೇರು ಹೊಂದಿರುವ ಹಾಗೂ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು ಅದೃಶ್ಯ ಮತದಾನಕ್ಕಾಗಿ (''ರಿಮೋಟ್ ಇ-ವೋಟಿಂಗ್'') ಮತ್ತು ಎಜಿಎಂನಲ್ಲಿನ ವಿದ್ಯುನ್ಮಾನ ಮತದಾನ ವ್ಯವಸ್ಥೆಯಲ್ಲಿ ಅನುಸರಿಸಬೇಕಾದ ಸೂಚನೆಗಳನ್ನು ಎಜಿಎಂ ಸೂಚನೆಯಲ್ಲಿ ಒದಗಿಸಲಾಗಿದೆ. ಎಜಿಎಂಗೆ ಹಾಜರಾಗುವ ಸದಸ್ಯರು ರಿಮೋಟ್ ಇ-ವೋಟಿಂಗ್‌ನಲ್ಲಿ ಮತ ಹಾಕದಿದ್ದಲ್ಲಿ ಎಜಿಎಂನಲ್ಲಿ ಇನ್‌ಸ್ಟಾ ಪೋಲ್ ಮೂಲಕ ಮತದಾನ ಮಾಡಬಹುದಾಗಿದೆ. ಅದೃಶ್ಯ ಇ-ಮತದಾನ ಮತ್ತು ಎಜಿಎಂ ಮತದಾನದಲ್ಲಿ ಅನುಸರಿಸಬೇಕಾದ ಸೂಚನೆಗಳು ಕಂಪನಿಯ ವೆಬ್‌ಸೈಟ್: www.ravindraenergy.com ಮತ್ತು https://evoting.karvy.comನಲ್ಲೂ ಸಹ ಲಭ್ಯವಿರುತ್ತದೆ.

6. ನಿಗದಿತ ದಿನಾಂಕ (ಕಟ್‌ಆಫ್ ಡೇಟ್) ಅಂದರೆ, 12, ಸೆಪ್ಟೆಂಬರ್ 2020 ರಂದು ಭೌತಿಕ ನಮೂನೆ ಅಥವಾ ಅಭೌತಿಕ ನಮೂನೆಯಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಸೂಚನಾ ಪತ್ರದಲ್ಲಿ ತಿಳಿಸಿರುವ ವ್ಯವಹಾರಗಳ ಮೇಲೆ ವಿದ್ಯುನ್ಮಾನದ ಮೂಲಕ ಕೆಫಿನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (''ಕೆಫಿನ್‌ಟೆಕ್''), (''ರಿಮೋಟ್ ಇ-ವೋಟಿಂಗ್'')ರವರು ಒದಗಿಸಿರುವ ವಿದ್ಯುನ್ಮಾನ ವೋಟಿಂಗ್ ವ್ಯವಸ್ಥೆಯ ಮೂಲಕ ಎಜಿಎಂ ನಡೆಯುವ ಸ್ಥಳದಿಂದ ಹೊರತುಪಡಿಸಿದ ಜಾಗದಲ್ಲಿ (ಅದೃಶ್ಯ ಇ-ಮತದಾನ) ಮಾಡಬಹುದಾಗಿದೆ. ಸದಸ್ಯರುಗಳಿಗೆ ನೀಡುವ ಮಾಹಿತಿಯೇನೆಂದರೇ,
   - i ಸೂಚನಾ ಪತ್ರದಲ್ಲಿ ತಿಳಿಯಪಡಿಸಿದ ವ್ಯವಹಾರ ವಿಷಯಗಳ ಮೇಲೆ ವಿದ್ಯುನ್ಮಾನ ಮೂಲಕದ ಮತದಾನದಿಂದ ವ್ಯವಹರಿಸಬಹುದು.
   - ii ಅದೃಶ್ಯ ಇ-ಮತದಾನವು 16ನೇ ಸೆಪ್ಟೆಂಬರ್ 2020ರ ಬುಧವಾರ ಬೆಳಿಗ್ಗೆ 9.00 ಕ್ಕೆ ಆರಂಭವಾಗುತ್ತದೆ.
   - iii ಅದೃಶ್ಯ ಮತದಾನವು 18ನೇ ಸೆಪ್ಟೆಂಬರ್ 2020ರ ಶುಕ್ರವಾರ ಸಂಜೆ 5.00 ಕ್ಕೆ ಮುಕ್ತಾಯಗೊಳ್ಳುತ್ತದೆ.
   - iv ವಿದ್ಯುನ್ಮಾನದ ಮೂಲಕ ಅಥವಾ ಎಜಿಎಂನಲ್ಲಿ ಮತಹಾಕಲು ಅರ್ಹತೆಯನ್ನು ನಿರ್ಧರಿಸಲು ನಿಗದಿತ (ಕಟ್‌ಆಫ್) ದಿನಾಂಕ ಸೆಪ್ಟೆಂಬರ್ 12, 2019 ಆಗಿರುತ್ತದೆ.
   - v ಯಾವುದೇ ವ್ಯಕ್ತಿ ಸೂಚನಾ ಪತ್ರಗಳ ರವಾನೆಯ ನಂತರ ಷೇರುಗಳನ್ನು ಹೊಂದಿ ಕಂಪನಿಯ ಸದಸ್ಯನಾದಲ್ಲಿ ಅಥವಾ ನಿಗದಿತ ದಿನಾಂಕ ಅಂದರೇ ಕಟ್ ಆಫ್ ಡೇಟ್‌ನಂದು ಷೇರುಗಳನ್ನು ಹೊಂದಿದ್ದರೆ evoting@karvy.com ಗೆ ಇ-ಮೇಲ್ ಕಳುಹಿಸಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದಾಗಿದೆ.
   - vi ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕಾದ ಸಂಗತಿಯೇನೆಂದರೇ (ಎ) ಇ-ಮತದಾನಕ್ಕಾಗಿ ಒದಗಿಸಲಾದ ದಿನಾಂಕ ಮತ್ತು ಸಮಯದ ನಂತರ ಕೆಫಿನ್ ಟೆಕ್‌ರವರು ಅದೃಶ್ಯ ಇ-ಮತದಾನದ ಮಾಡ್ಯೂಲನ್ನು ಮುಚ್ಚುತ್ತಾರೆ (ಬಿ) ಎಜಿಎಂ ಇನ್‌ಸ್ಟಾ ಪೋಲ್ ಮತದಾನ ಮಾಡುವುದಕ್ಕಾಗಿ ವಿದ್ಯುನ್ಮಾನ ವ್ಯವಸ್ಥೆಯನ್ನು ಒದಗಿಸಲಾಗುತ್ತದೆ (ಸಿ) ಅದೃಶ್ಯ ಮತದಾನದ ಮೂಲಕ ಸಭೆಗೆ ಮುಂಚೆ ಮತದಾನ ಮಾಡಿರುವವರು ಎಜಿಎಂ ಸಭೆಗೂ ಸಹ ಹಾಜರಿರಬಹುದಾಗಿದೆ ಆದರೆ ಸಭೆಯಲ್ಲಿ ಮತದಾನ ಮಾಡಲು ಅರ್ಹರಾಗುವುದಿಲ್ಲ ಮತ್ತು (ಡಿ) ಯಾವ ವ್ಯಕ್ತಿಯ ಹೆಸರು ನಿಗದಿತ ದಿನಾಂಕದಂದು ಇದ್ದಂತೆ ಸದಸ್ಯರ ರಿಜಿಸ್ಟರ್‌ನಲ್ಲಿ ದಾಖಲಾಗಿದೆಯೋ ಅಥವಾ ನಿಕ್ಷೇಪದಾರರು ನಿರ್ವಹಿಸುತ್ತಿರುವ ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ದಾಖಲಾಗಿದೆಯೋ ಅಂತಹ ಸದಸ್ಯರು ಅದೃಶ್ಯ ಇ-ಮತದಾನ ಸೌಲಭ್ಯವನ್ನು ಪಡೆದುಕೊಳ್ಳಲು ಹಾಗೂ ಸಭೆಯಲ್ಲೂ ವಿದ್ಯುನ್ಮಾನ ವ್ಯವಸ್ಥೆ ( ಇನ್‌ಸ್ಟಾ ಪೋಲಿಂಗ್)ಯಲ್ಲಿ ಮತದಾನ ಮಾಡಲು ಅರ್ಹನಿರುತ್ತಾನೆ.
   - vii ಸೂಚನಾ ಪತ್ರ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.ravindraenergy.comನಲ್ಲಿ ''ಇನ್ವೆಸ್ಟರ್ಸ್''ನಡಿ, ಬಿಎಸ್‌ಇ ಲಿಮಿಟೆಡ್‌ನಲ್ಲಿನ www.bseindia.comನಲ್ಲಿ ಹಾಗೂ ಕೆಫಿನ್ ಟೆಕ್‌ನ ವೆಬ್‌ಸೈಟ್ https://evoting.karvy.com ನಲ್ಲಿ ಲಭ್ಯವಿರುತ್ತದೆ.
   - viii ಸದಸ್ಯರುಗಳು ಯಾವುದೇ ಸ್ಪಷ್ಟನೆ ವಿವರಣೆಗಳು ಬೇಕಾದಲ್ಲಿ ಪದೇ ಪದೇ ಕೇಳುವ ಪ್ರಶ್ನೆಗಳನ್ನು (ಎಫ್‌ಎಕ್ಯೂಸ್) ನೋಡಲು https://evoting.karvy.comನಿಂದ ಡೌನ್‌ಲೋಡ್ ಸೆಕ್ಷನ್‌ನಲ್ಲಿ ಲಭ್ಯವಾಗುವ ಇ-ವೋಟಿಂಗ್ ಯೂಸರ್ ಮ್ಯಾನ್ಯುವಲ್ ಅನ್ನು ನೋಡುವುದು. ಅಥವಾ ಹೆಚ್ಚಿನ ಸ್ಪಷ್ಟನೆಗಳಿಗಾಗಿ ಶ್ರೀ ಆನಂದನ್ ಕೆ., ವ್ಯವಸ್ಥಾಪಕ, ಕೆಫಿನ್ ಟೆಕ್ನಾಲಾಜೀಸ್ ಪ್ರೈವೇಟ್ ಲಿಮಿಟೆಡ್, ಸೆಲಿನಿಯಂ ಟವರ್ ಸಂ.ಬಿ, ಪ್ಲಾಟ್ ಸಂ. 31-32, ಗಚ್ಚಿಬೌಲಿ, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್‌ರಾಮ್ ಗುಡ, ಹೈದರಾಬಾದ್ 500032, ಇಮೇಲ್: anandan.k@kfintech.com ಮತ್ತು Einward.ris@kfintech.com, ದೂರವಾಣಿ +91-40-6716 1591 ಅಥವಾ ಹೆಚ್ಚಿನ ಸ್ಪಷ್ಟನೆಗಳಿಗಾಗಿ ಶುಲ್ಕ ರಹಿತ ಸಂಖ್ಯೆ 1800-34-54-001 ಕ್ಕೆ ಕರೆ ಮಾಡಬಹುದಾಗಿದೆ.

**ರವೀಂದ್ರ ಎನರ್ಜಿ ಲಿಮಿಟೆಡ್ ಪರವಾಗಿ**

ದಿನಾಂಕ : ಆಗಸ್ಟ್ 29, 2020 ಸಹಿ/-

ಸ್ಥಳ : ಬೆಳಗಾವಿ **ವಾದಿರಾಜ್ ಮುತಾಲಿಕ್**

ಕಂಪನಿ ಕಾರ್ಯದರ್ಶಿ ಮತ್ತು ಸಮನ್ವಯ ಅಧಿಕಾರಿ


# ಕನ್ನಡ, ಮರಾಠಿಗರ ಶಾಂತಿಸಭೆ ಯಶಸ್ವಿ

## ಪ್ರತಿಷ್ಠಾಪಿಸಿದ ಸ್ಥಳದಲ್ಲೇ ರಾಯಣ್ಣ ಪ್ರತಿಮೆ | ಆ ಜಾಗಕ್ಕೆ ಶಿವಾಜಿ ವೃತ್ತ ಎಂದು ನಾಮಕರಣ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಸಂಗೊಳ್ಳಿ ರಾಯಣ್ಣ ಪ್ರತಿಮೆ ಪ್ರತಿಷ್ಠಾಪನೆ ವಿಚಾರ ವಿವಾದಕ್ಕೆ ತಿರುಗಿದ ಹಿನ್ನೆಲೆಯಲ್ಲಿ ಪೀರನವಾಡಿಯಲ್ಲಿ ಶುಕ್ರವಾರ ಕಾನೂನು ಸುವ್ಯವಸ್ಥೆ ಕಾಪಾಡಲು ಜಿಲ್ಲಾಡಳಿತ ನಡೆಸಿದ ಶಾಂತಿಸಭೆ ಯಶಸ್ವಿಯಾಗಿದೆ.

ಸಂಧಾನ ಸಭೆಯಲ್ಲಿ ನಡೆದ ಒಮ್ಮತದ ನಿರ್ಣಯದಂತೆ ಈಗ ಪ್ರತಿಷ್ಠಾಪನೆಯಾಗಿರುವ ಜಾಗದಲ್ಲಿಯೇ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಇರಲಿದೆ. ಆದರೆ, ಆ ವೃತ್ತಕ್ಕೆ ಶಿವಾಜಿವೃತ್ತ ಎಂದು ನಾಮಕರಣ ಮಾಡಲಾಗುತ್ತದೆ. ಇದಕ್ಕೆ ಕನ್ನಡಿಗರು ಮತ್ತು ಮರಾಠಿ ಭಾಷಿಕರಿಂದ ಸಹಮತ ಕೂಡ ವ್ಯಕ್ತವಾಗಿದೆ.

ಗ್ರಾಮದ ಲಕ್ಷ್ಮಿ ಮಂಗಲ ಕಾರ್ಯಾಲಯದಲ್ಲಿ ಜಿಲ್ಲಾಧಿಕಾರಿ ಎಂ.ಜಿ.ಹಿರೇಮಠ ಮತ್ತು ಕಾನೂನು ಸುವ್ಯವಸ್ಥೆಯ ಎಡಿಜಿಪಿ ಅಮರಕುಮಾರ ಪಾಂಡೆ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಗ್ರಾಮದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವಂತೆ ಮನವಿ ಮಾಡಲಾಯಿತು. ಈ ವೇಳೆ ಕನ್ನಡ ಮತ್ತು ಮರಾಠಿಯ ಉಭಯ ಭಾಷಿಕ ಮುಖಂಡರ ಅಭಿಪ್ರಾಯ ಸಂಗ್ರಹಿಸಲಾಯಿತು.

> **ಕಾನೂನಾತ್ಮಕವಾಗಿ ಪುತ್ಥಳಿ ಪ್ರತಿಷ್ಠಾಪನೆಗೆ ಸರ್ಕಾರ ಸಿದ್ಧತೆ ನಡೆಸಿತ್ತು. ವಿವಾದ ಸಂಬಂಧ ಜನಪ್ರತಿನಿಧಿಗಳ ಅಭಿಪ್ರಾಯ ಪಡೆಯಲಾಗುತ್ತದೆ. ಎಲ್ಲರೂ ಅನ್ಯೋನ್ಯವಾಗಿ ಇರಬೇಕು. ವೈಮನಸು ಮುಂದುವರಿಸಬಾರದು.**
>
> • **ರಾಘವೇಂದ್ರ ಸುಹಾಸ್** ಐಜಿಪಿ, ಉತ್ತರ ವಲಯ

ಜಿಲ್ಲಾಡಳಿದ ಅನುಮತಿ ಇಲ್ಲದೇ ಸ್ಥಾಪನೆ ಆಗಿರುವ ರಾಯಣ್ಣ ಪ್ರತಿಮೆ ತೆರವುಗೊಳಿಸಬೇಕು. ರಾಯಣ್ಣ ಪ್ರತಿಮೆ ಸ್ಥಾಪನೆಗೆ ಬೇರೆ ಜಾಗ ನೀಡಬೇಕು. ಸಂಗೊಳ್ಳಿ ರಾಯಣ್ಣ ಪ್ರತಿಮೆ ಸ್ಥಾಪನೆಗೆ ನಮ್ಮ ವಿರೋಧವಿಲ್ಲ. ಆದರೆ, ಜಿಲ್ಲಾಡಳಿತ ನಿಗದಿ ಮಾಡುವ ಜಾಗದಲ್ಲಿ ಪ್ರತಿಮೆ ಸ್ಥಾಪಿಸಿದರೆ ಆ ಕಾರ್ಯಕ್ರಮದಲ್ಲಿ ನಾವೂ ಪಾಲ್ಗೊಳ್ಳುತ್ತೇವೆ. ಮಧ್ಯರಾತ್ರಿ ಸಮಯದಲ್ಲಿ ರಾಯಣ್ಣ ಪ್ರತಿಮೆ ಸ್ಥಾಪಿಸುವ ಅಗತ್ಯ ಏನಿತ್ತು ಎಂದು ಮರಾಠಿ ಭಾಷಿಕರು ಪ್ರಶ್ನಿಸಿದರು.

ಪುತ್ಥಳಿ ನಿರ್ಮಾಣ ಸಂಬಂಧ ಪೀರನವಾಡಿ ಗ್ರಾಪಂನಲ್ಲಿ ಠರಾವು ಪಾಸ್ ಮಾಡಿದ್ದೇವೆ. 2018ರಲ್ಲೇ ಠರಾವ್ ಪಾಸ್ ಆಗಿದ್ದು, ಜಿಲ್ಲಾಡಳಿತ ಮತ್ತು ಸರ್ಕಾರಕ್ಕೂ ಮಾಹಿತಿ ನೀಡಲಾಗಿತ್ತು. ಮಾಜಿ ಸಿಎಂ ಸಿದ್ದರಾಮಯ್ಯ, ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರ ಗಮನಕ್ಕೂ ತಂದಿದ್ದೇವೆ. ಹೀಗಿದ್ದರೂ ಪ್ರತಿಮೆ ನಿರ್ಮಾಣಕ್ಕೆ ಒಪ್ಪಿಗೆ ನೀಡಲು ಏಕೆ ಹಿಂದೇಟು ಹಾಕಲಾಗುತ್ತಿದೆ? ಪುತ್ಥಳಿ ನಿರ್ಮಾಣಕ್ಕೆ ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸುವ ಮೂಲಕ ಮರಾಠಿ ಮುಖಂಡರಿಗೆ ಕನ್ನಡ ಪರ ಸಂಘಟನೆ ಮುಖಂಡರು ತಿರುಗೇಟು ನೀಡಿದರು.

ಈ ವೇಳೆ ಜಿಲ್ಲಾಧಿಕಾರಿ ಎಂ.ಜಿ.ಹಿರೇಮಠ ಮಾತನಾಡಿ, ಸಂಗೊಳ್ಳಿ ರಾಯಣ್ಣ, ಶಿವಾಜಿ ಮಹಾರಾಜರ ಬಗ್ಗೆ ಎರಡೂ ಬಣದ ಮುಖಂಡರಿಗೆ ಗೌರವ ಇದೆ. ಇಂಥ ಗೌರವ ಭಾವನೆ ಹೊಂದಿರುವ ಪ್ರದೇಶಗಳಲ್ಲಿ ಗಲಾಟೆ ಸರಿಯಲ್ಲ. ಯಾವುದೇ ಸಮಾಜಕ್ಕೆ ಅನ್ಯಾಯ ಆಗಲು ನಾವು ಬಿಡುವುದಿಲ್ಲ. ನಾವೆಲ್ಲರೂ ಒಂದೇ ಭಾವನೆ ಎಂಬ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಅಮರಕುಮಾರ ಪಾಂಡೆ ಮಾತನಾಡಿ, ಮಹಾನ್ ವ್ಯಕ್ತಿಗಳ ಹೆಸರಲ್ಲಿ ಗಲಾಟೆ ಮಾಡುವುದು ಸರಿಯೇ? ಕಾನೂನು ಮತ್ತು ಸುವ್ಯವಸ್ಥೆ ಹಾಳಾಗದಂತೆ ನೋಡಿಕೊಳ್ಳಿ ಎಂದು ಸಭೆಯಲ್ಲಿದ್ದ ಎಲ್ಲರಿಗೂ ಮನವರಿಕೆ ಮಾಡುವ ಯತ್ನ ಮಾಡಿದರು. ಸಭೆಯ ಕೊನೆಯಲ್ಲಿ ಎಲ್ಲರೂ ಚರ್ಚಿಸಿದ ನಂತರ ರಾಯಣ್ಣನ ಪ್ರತಿಮೆಯನ್ನು ಈಗಾಗಲೇ ಸ್ಥಾಪಿಸಲಾಗಿದೆ. ರಾಯಣ್ಣ ಅಭಿಮಾನಿಗಳು ಪ್ರತಿ ಷ್ಠಾಪಿಸಿದ ಸ್ಥಳದಲ್ಲೇ ರಾಯಣ್ಣ ಪ್ರತಿಮೆ ಇರಲು ಮರಾಠಿ ಭಾಷಿಕರ ಒಪ್ಪಿಗೆ ಸೂಚಿಸಿದರು. ಅದರಂತೆ ಆ ಜಾಗಕ್ಕೆ ಶಿವಾಜಿ ವೃತ್ತ ಎಂದು ನಾಮಕರಣ ಮಾಡುವ ರಾಯಣ್ಣ ಅಭಿಮಾ ನಿಗಳು, ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಕೂಡ ಒಪ್ಪಿಗೆ ಸೂಚಿಸಿದರು. ಹೀಗಾಗಿ ಜಿಲ್ಲಾಡಳಿತವು ನಡೆಸಿದ ಶಾಂತಿ ಸಭೆ ಕೂಡ ಯಶಸ್ವಿಯಾಯಿತು. ಈ ಸಂದರ್ಭದಲ್ಲಿ ಕನ್ನಡ ಮತ್ತು ಮರಾಠಿ ಭಾಷಿಕ ತಲಾ 25 ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು. ಉತ್ತರ ವಲಯ ಐಜಿಪಿ ರಾಘವೇಂದ್ರ ಸುಹಾಸ, ಪೊಲೀಸ್ ಆಯುಕ್ತ ಕೆ. ತ್ಯಾಗರಾಜನ್, ಡಿಸಿಪಿ ಸೀಮಾ ಲಾಟ್ಕರ್ ಇದ್ದರು.



ರಾಯಣ್ಣ ಪ್ರತಿಮೆ ವಿವಾದದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಎಂ.ಜಿ.ಹಿರೇಮಠ, ಎಡಿಜಿಪಿ ಅಮರ ಕುಮಾರ ಪಾಂಡೆ ಪೀರನವಾಡಿಯಲ್ಲಿ ಕನ್ನಡ- ಮರಾಠಿ ಭಾಷಿಕರೊಂದಿಗೆ ಶಾಂತಿ ಸಭೆ ನಡೆಸಿದರು.

## ಭೇದಭಾವ ತೋರದೆ ತಪ್ಪಿತಸ್ಥರ ವಿರುದ್ಧ ಕ್ರಮ: ಎಡಿಜಿಪಿ ಪಾಂಡೆ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಪೀರನವಾಡಿಯಲ್ಲಿ ಮೂರ್ತಿ ಪ್ರತಿಷ್ಠಾಪನೆಯ ವಿವಾದಿತ ಸ್ಥಳದಲ್ಲಿ ಕಾನೂನು ಸುವ್ಯವಸ್ಥೆಯ ಸಮಸ್ಯೆ ಉಂಟಾಗಿತ್ತು. ಅದನ್ನು ನಿಯಂತ್ರಣಕ್ಕೆ ತರಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಮರಕುಮಾರ ಪಾಂಡೆ ಹೇಳಿದರು.

ಸಂಗೊಳ್ಳಿ ರಾಯಣ್ಣನ ಮೂರ್ತಿ ಪ್ರತಿಷ್ಠಾಪನೆಯ ವಿವಾದಿತ ಸ್ಥಳ ಪೀರನವಾಡಿಯಗೆ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಕಳೆದ ಎರಡು ದಿನಗಳಿಂದ ಪೀರನವಾಡಿ ವೃತ್ತದಲ್ಲಿ ಸಂಗೊಳ್ಳಿ ರಾಯಣ್ಣನ ಪುತ್ಥಳಿ ಪ್ರತಿಷ್ಠಾಪನೆ ಮಾಡುವುದು ಕಾನೂನು ಸುವ್ಯವಸ್ಥೆಗೆ ಸಮಸ್ಯೆಯಾಗಿತ್ತು. ಈ ಕುರಿತು ಹಿರಿಯ ಅಧಿಕಾರಿಗಳು ಸಭೆ ನಡೆಸಿದ್ದಾರೆ. ಪೀರನವಾಡಿಯಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿರಬೇಕು. ಯಾರೂ ಭಯ ಪಡುವ ಅಗತ್ಯ ಇಲ್ಲ. ಸಂಗೊಳ್ಳಿ ರಾಯಣ್ಣ ಮೂರ್ತಿ ಸ್ಥಾಪನೆ ವಿಚಾರ ವಿವಾದಕ್ಕೆ ತಿರುಗಿತ್ತು. ಈ ಹಿನ್ನೆಲೆಯಲ್ಲಿ ಲಾಠಿ ಚಾರ್ಜ್ ಮಾಡಿ ಪರಿಸ್ಥಿತಿ ನಿಯಂತ್ರಣ ಮಾಡಲಾಗಿದೆ. ಕನ್ನಡ, ಮರಾಠಿ ಪ್ರಶ್ನೆಯೇ ಇಲ್ಲ. ಯಾರು ತಪ್ಪು ಮಾಡಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳುವುದು ಖಚಿತ ಎಂದು ಎಚ್ಚರಿಕೆ ನೀಡಿದ ಅವರು, ತಪ್ಪಿತಸ್ಥರ ವಿರುದ್ಧ ಮೂರು ಪ್ರಕರಣ ದಾಖಲಾಗಿದ್ದು ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಾನೂನನ್ನು ಕೈಗೆ ತೆಗೆದುಕೊಂಡು ಗಲಾಟೆ ಮಾಡಿದವರು ತಪ್ಪಿತಸ್ಥರಾಗುತ್ತಾರೆ. ಇದರಲ್ಲಿ ಕನ್ನಡ, ಮರಾಠಿ ಎನ್ನುವ ಪ್ರಶ್ನೆಯೇ ಇಲ್ಲ. ಯಾರು ತಪ್ಪು ಮಾಡಿದ್ದಾರೋ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಅದನ್ನು ನಗರ ಪೊಲೀಸರು ಸಮರ್ಥವಾಗಿ ನಿಭಾಯಿಸಿದ್ದಾರೆ ಎಂದ ಅವರು, ನಗರ ಪೊಲೀಸರೊಂದಿಗೆ ಚರ್ಚೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಈ ಸಂದರ್ಭದಲ್ಲಿ ಉತ್ತರ ವಲಯ ಐಜಿಪಿ ರಾಘವೇಂದ್ರ ಸುಹಾಸ್, ನಗರ ಪೊಲೀಸ್ ಆಯುಕ್ತ ಕೆ.ತ್ಯಾಗರಾಜನ್, ಡಿಸಿಪಿ ಸೀಮಾ ಲಾಟ್ಕರ್, ಎಸಿಪಿ ಮಹಾಂತೇಶ್ವರ ಜಿದ್ದಿ ಸೇರಿದಂತೆ ಮೊದಲಾದವರು ಉಪಸ್ಥಿತರಿದ್ದರು.

## ಚನ್ನಮ್ಮ ಪಡೆ ಗಸ್ತು ನಿಯೋಜನೆ

**ಬೆಳಗಾವಿ:** ಸಂಗೊಳ್ಳಿ ರಾಯಣ್ಣನ ಪ್ರತಿಮೆ ಸ್ಥಾಪನೆಯಿಂದಾಗಿ ಬೂದಿ ಮುಚ್ಚಿದ ಕೆಂಡದಂತಾಗಿರುವ ಪೀರನವಾಡಿಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಮಹಿಳಾ ಪೊಲೀಸರೇ ಇರುವ ಚನ್ನಮ್ಮ ಪಡೆಯನ್ನು ನಿಯೋಜನೆ ಮಾಡಲಾಗಿದೆ. ಇದೆ ವೇಳೆ ಪೊಲೀಸರು ನಗರದಲ್ಲಿ ಗಸ್ತು ತಿರುಗಿ ಗುಂಪು ಗುಂಪಾಗಿ ನಿಲ್ಲದಂತೆ ಎಚ್ಚರಿಕೆಯನ್ನೂ ನೀಡುತ್ತಿದ್ದಾರೆ. ಕನ್ನಡಪರ ಸಂಘಟನೆಗಳಿಂದ ಮಧ್ಯರಾತ್ರಿ ಸಂಗೊಳ್ಳಿ ರಾಯಣ್ಣ ಮೂರ್ತಿ ಪ್ರತಿಷ್ಠಾಪನೆ ಮಾಡಿದ ನಂತರ ಪೀರನವಾಡಿ ಗ್ರಾಮದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ. ರಾಯಣ್ಣ ಮೂರ್ತಿ ಪ್ರತಿಷ್ಠಾಪನೆಗೆ ಶಿವಸೇನೆ ಸೇರಿದಂತೆ ಎಂಇಎಸ್ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಚನ್ನಮ್ಮ ಪಡೆ ಸೇರಿದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಇನ್ನು ರಾಯಣ್ಣ ಪ್ರತಿಮೆಗೆ ಮರಾಠ ಸಮುದಾಯದ ಮಹಿಳೆಯರ ವಿರೋಧ ಹಿನ್ನೆಲೆ ಚನ್ನಮ್ಮ ಪಡೆಯನ್ನು ಕೂಡ ಕರೆಸಿಕೊಳ್ಳಲಾಗಿದೆ. ಸದ್ಯಕ್ಕೆ ಪೀರನವಾಡಿಯಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ ಯಾವುದೇ ಸಮಯದಲ್ಲಾದರೂ ವಾತಾವರಣ ಹದಗೆಡಬಹುದು ಎಂಬ ಕಾರಣಕ್ಕೆ ಗ್ರಾಮದಲ್ಲಿ ಪರಿಸ್ಥಿತಿ ಹತೋಟಿಗೆ ತರಲು ಪೊಲೀಸರು ಗಸ್ತು ತಿರುಗುವ ಮೂಲಕ ಗುಂಪು ಗುಂಪಾಗಿ ನಿಲ್ಲದಂತೆ ಗ್ರಾಮಸ್ಥರಿಗೆ ಸೂಚನೆ ನೀಡುತ್ತಿದ್ದಾರೆ.

## ಹೇಳಿಕೆ ನೀಡೋದು ಬಿಟ್ಟು ಪುತ್ಥಳಿಗೆ ಮಾಲಾರ್ಪಣೆ ಮಾಡಿ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ವಿವಾದಿತ ಸ್ಥಳದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಪ್ರತಿಷ್ಠಾಪನೆ ಮಾಡಲಾಗಿದೆ. ಜಿಲ್ಲೆಯ ಜನಪ್ರತಿನಿಧಿಗಳು ಮಾಧ್ಯಮ ಹೇಳಿಕೆ ನೀಡುವುದನ್ನು ಬಿಟ್ಟು ಧೈರ್ಯವಿದ್ದಲ್ಲಿ ರಾಯಣ್ಣ ಪುತ್ಥಳಿಗೆ ಮಾಲಾರ್ಪಣೆ ಮಾಡುವಂತೆ ಕರವೇ ರಾಜ್ಯ ಸಂಚಾಲಕ ಮಹಾದೇವ ತಳವಾರ ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಾಜಿ ಪುತ್ಥಳಿ ಪ್ರತಿಷ್ಠಾಪನೆಯಾದಾಗ ಜಿಲ್ಲೆಯ ಜನಪ್ರತಿನಿಧಿಗಳು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸುತ್ತಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಸಂಗೊಳ್ಳಿ ರಾಯಣ್ಣ ಪ್ರಾಣ ತ್ಯಾಗ ಮಾಡಿದ್ದಾರೆ. ರಾಯಣ್ಣನ ಬಗ್ಗೆ ಹೇಳಿಕೆ ನೀಡುವ ಜಿಲ್ಲೆಯ 18 ಶಾಸಕರು ಮರುಪ್ರತಿಷ್ಠಾಪನೆ ಮಾಡಲಾಗಿರುವ ರಾಯಣ್ಣ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಬೇಕು ಎಂದು ಆಗ್ರಹಿಸಿದರು. ಕರವೇ ಜಿಲ್ಲಾಧ್ಯಕ್ಷ ದೀಪಕ ಗುಡಗನಟ್ಟಿ ಮಾತನಾಡಿ, ನಂದಗಡ ಸಂಪರ್ಕ ಕಲ್ಪಿಸುವ ಪೀರನವಾಡಿಯಲ್ಲಿ ರಾಯಣ್ಣನ ಪುತ್ಥಳಿ ನಿರ್ಮಾಣ ಆಗಬೇಕು ಎಂಬ ಬೇಡಿಕೆ ಇತ್ತು. ರಾಯಣ್ಣನ ಸಮಾಧಿ ದರ್ಶನಕ್ಕೆ ಮುನ್ನ ರಾಯಣ್ಣ ಪುತ್ಥಳಿಗೆ ಮಾಲಾರ್ಪಣೆ ಮಾಡಬೇಕು ಎಂಬ ಉದ್ದೇಶ ನಮ್ಮದು. 2018ರಲ್ಲಿ ಈ ಸಂಬಂಧ ಗ್ರಾಮ ಪಂಚಾಯತಿಯಲ್ಲಿ ಠರಾವು ಪಾಸ್ ಆಗಿದೆ. ಮೂರ್ತಿ ಪ್ರತಿ ಷ್ಠಾಪನೆಗೆ ಸ್ಥಳೀಯರ ವಿರೋಧವಿರಲಿಲ್ಲ. ಆದರೆ ಸ್ಥಳೀಯ ಎಂಇಎಸ್ ಕಾರ್ಯಕರ್ತರು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದರು. ಹೀಗಾಗಿ ಬೆಳಗಿನ ಜಾವ ಕನ್ನಡ ಸಂಘಟನೆ ಪದಾ ಧಿಕಾರಿಗಳು ಸೇರಿ ಮೂರ್ತಿ ಮರು ಪ್ರತಿ ಷ್ಠಾಪನೆ ಮಾಡಿದ್ದೇವೆ. ಇಲ್ಲವಾದರೆ, ನಗರದಲ್ಲಿ ಕಾನೂನು ಸುವ್ಯವಸ್ಥೆ ಹಾಳಾ ಗುತ್ತಿತ್ತು. ಹೀಗಾಗಿ ಈ ದಿಢೀರ್ ನಿರ್ಧಾರ ಕೈ ಗೊಂಡಿದ್ದೇವೆ. ಭಾಷಾ ಸೌಹಾರ್ದತೆ ಹಾಳು ಮಾಡುತ್ತಿರುವ ಎಂಇಎಸ್ ಕಾರ್ಯ ಕರ್ತ ರನ್ನು ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

## ಕರ್ತವ್ಯ ನಿಷ್ಠೆ ಮೆರೆದ ಡಿಸಿಪಿ ಸೀಮಾ



• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಕಳೆದ ಎರಡು ದಿನಗಳ ಹಿಂದೆ ಡಿಸಿಪಿ ಸೀಮಾ ಲಾಟ್ಕರ್ ಅವರ ವರ್ಗಾವಣೆ ಆದೇಶ ಕೈ ಸೇರಿದೆ. ಆದರೆ ಸದ್ಯ ಬೆಳಗಾವಿ ನಗರದಲ್ಲಿ ವಿಷಮ ಪರಿಸ್ಥಿತಿ ಇರುವುದರಿಂದ ಅಧಿಕಾರ ಹಸ್ತಾಂತರಿಸದೇ ಮುಂದೆ ನಿಂತು ಕರ್ತವ್ಯ ನಿರ್ವಹಿಸುವ ಮೂಲಕ ಕರ್ತವ್ಯ ನಿಷ್ಠೆ ಮೆರೆದಿದ್ದಾರೆ.

ನಗರದ ಸಮೀಪದಲ್ಲಿರುವ ಪೀರನವಾಡಿ ವೃತ್ತದಲ್ಲಿ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣನ ಪುತ್ಥಳಿ ನಿರ್ಮಾಣ ವಿಷಯವಾಗಿ ಕಳೆದ 14 ದಿನಗಳಿಂದ ವಿವಾದ ಉಂಟಾಗಿದ್ದು, ಇದರಿಂದಾಗಿ ನಗರದಲ್ಲಿ ಯಾವುದೇ ಕಾರಣಕ್ಕೂ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಉಂಟಾಗಬಾರದು ಎಂಬ ಉದ್ದೇಶದಿಂದ ವರ್ಗಾವಣೆ ಆದೇಶ ಕೈ ಸೇರಿದ್ದರೂ, ಅಧಿಕಾರ ಹಸ್ತಾಂತರ ಮಾಡದೇ ಡಿಸಿಪಿ ಸೀಮಾ ಲಾಟ್ಕರ್ ಅವರು, ಪೊಲೀಸ್ ಆಯುಕ್ತರಿಗಿಂತ ಮೊದಲೇ ಬೆಳ್ಳಂಬೆಳಗ್ಗೆ ವಿವಾದಿತ ಸ್ಥಳಕ್ಕೆ ತೆರಳಿ ಬೀಡು ಬಿಟ್ಟಿದ್ದಾರೆ. ಜತೆಗೆ ಎರಡೂ ಗುಂಪಿನ ಮುಖಂಡರಿಗೆ ಎಚ್ಚರಿಕೆಯನ್ನು ನೀಡಿದ್ದಾರೆ. ನಂತರ ಪೊಲೀಸ್ ಆಯುಕ್ತ ಡಾ. ಕೆ. ತ್ಯಾಗರಾಜನ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದ್ದಾರೆ. ಒಟ್ಟಿನಲ್ಲಿ ವರ್ಗಾವಣೆ ಆದೇಶ ಕೈ ಸೇರಿದ್ದರೂ ವೀರರಾಣಿ ಚನ್ನಮ್ಮಳಂತೆ ಡಿಸಿಪಿ ಸೀಮಾ ಲಾಟ್ಕರ್ ಕರ್ತವ್ಯ ನಿರ್ವಹಿಸುತ್ತಿರುವುದಕ್ಕೆ ನಗರದ ಜನತೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

## ಜನಪ್ರತಿನಿಧಿಗಳು ಮೌನಕ್ಕೆ ಶರಣು

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಪೀರನವಾಡಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಪ್ರತಿಷ್ಠಾಪನೆ ವಿವಾದ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಈ ವಿಚಾರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ರಮೇಶ ಜಾರಕಿಹೊಳಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಮತ್ತು ಬೆಳಗಾವಿ ಗ್ರಾಮೀಣ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಅವರನ್ನು ಹೊರತುಪಡಿಸಿದರೆ ಜಿಲ್ಲೆಯ ಬಹುತೇಕ ಜನಪ್ರತಿನಿಧಿಗಳು ತುಟಿ ಬಿಚ್ಚದೇ ಮೌನಕ್ಕೆ ಶರಣಾಗಿದ್ದಾರೆ.

ಕೇಂದ್ರ ರೈಲ್ವೆ ಖಾತೆ ಸಚಿವ ಸುರೇಶ ಅಂಗಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಶಶಿಕಲಾ ಜೊಲ್ಲೆ, ಜವಳಿ ಖಾತೆ ಸಚಿವ ಶ್ರೀಮಂತ ಪಾಟೀಲ, ಮೌನಕ್ಕೆ ಶರಣಾಗಿದ್ದಾರೆ. ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪೀರನವಾಡಿಯಲ್ಲಿ ರಾಯಣ್ಣನ ಪ್ರತಿಮೆ ವಿವಾದ ಶುರುವಾಗಿ 14 ದಿನ ಕಳೆದಿದ್ದರೂ ಬೆಳಗಾವಿ ದಕ್ಷಿಣ ಕ್ಷೇತ್ರದ ಶಾಸಕ ಅಭಯ ಪಾಟೀಲ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದಿರುವುದು ವಿಪರ್ಯಾಸವೇ ಸರಿ. ಬೆಳಗಾವಿ ಗ್ರಾಮೀಣ ಕ್ಷೇತ್ರ ಶಾಸಕಿ ಲಕ್ಷ್ಮೀ ಹೆಬ್ಬಾಳಕರ, ಬೆಳಗಾವಿಯ ಪೀರನವಾಡಿಯಲ್ಲಿ ರಾಯಣ್ಣ ಪ್ರತಿಮೆ ವಿಚಾರವಾಗಿ ಗಲಾಟೆ ನಡೆದಿರುವುದು ದುರದೃಷ್ಟಕರ. ಈ ವಿಷಯ ದಲ್ಲಿ ಸರ್ಕಾರ ಮಧ್ಯಪ್ರವೇಶಿಸಿ ವಿವಾದ ಇತ್ಯರ್ಥಗೊಳಿಸಬೇಕು. ರಾಯಣ್ಣನ ತ್ಯಾಗ, ಬಲಿದಾನ ಒಂದೆಡೆ, ದೇಶ ಒಗ್ಗೂಡಿಸಿದ ಶಿವಾಜಿ ಮಹಾರಾಜ ಮತ್ತೊಂದೆಡೆ. ಈ ಇಬ್ಬರೂ ಮಹಾಪುರುಷರ ಪ್ರತಿಮೆ ವಿಚಾರದಲ್ಲಿ ರಾಜಕಾರಣಕ್ಕೆ ಅವಕಾಶ ನೀಡಬಾರದು. ಎಂಇಎಸ್ ಬಗ್ಗೆ ನಾನು ಮೊದಲಿನಿಂದಲೂ ವಿರೋಧಿಸುತ್ತ ಬಂದಿದ್ದೇನೆ. ಎಂಇಎಸ್ ಪುಂಡಾಟಿಕೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ಎಂದು ಹೇಳಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ, ಪೀರನವಾಡಿಯ ರಾಯಣ್ಣ ಪ್ರತಿಮೆ ವಿವಾದಕ್ಕೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವರು, ಆ ಕ್ಷೇತ್ರದ ಶಾಸಕರು ಸ್ಥಳೀಯ ಉಭಯ ಭಾಷಿಕರ ಮುಖಂಡರ ಜೊತೆಗೆ ಸಭೆ ನಡೆಸಿ, ಸೌಹಾರ್ದತೆಯಿಂದ ಈ ವಿವಾದ ಇತ್ಯರ್ಥಗೊಳಿಸುವಂತೆ ಸಲಹೆ ನೀಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ರಮೇಶ ಜಾರಕಿಹೊಳಿ ಅವರು ರಾಯಣ್ಣ ಪ್ರತಿಮೆ ವಿವಾದವನ್ನು ಸೌಹಾರ್ದಯುತವಾಗಿ ಇತ್ಯರ್ಥಗೊಳಿಸುವ ಸಂಬಂಧ ಆ.29ರಂದು ಸಚಿವ ಕೆ.ಎಸ್.ಈಶ್ವರಪ್ಪ ಜೊತೆಗೆ ಸಭೆ ನಡೆಸಿ, ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು. ಆದರೆ, ಸರ್ಕಾರದಿಂದ ಯಾವುದೇ ಅನುಮತಿಗೆ ಕಾಯದೇ ರಾಯಣ್ಣನ ಅಭಿಮಾನಿಗಳು ಶುಕ್ರವಾರ ಬೆಳಗಿನ ಜಾವ ತಾವು ಗುರುತಿಸಿದ ಜಾಗದಲ್ಲೇ ರಾಯಣ್ಣನ ಪ್ರತಿಮೆ ಸ್ಥಾಪಿಸುವ ಮೂಲಕ ಪ್ರತಿಮೆ ಸ್ಥಾಪಿಸಿದ್ದಾರೆ. ಆದರೆ, ಇದಕ್ಕೆ ಸ್ಥಳೀಯ ಮರಾಠಿ ಭಾಷಿಕರು ಆಕ್ಷೇಪ ವ್ಯಕ್ತಪಡಿಸಿದ್ದು, ಈ ವಿವಾದ ಇದೀಗ ಹೊಸ ಸ್ವರೂಪ ಪಡೆದುಕೊಂಡಿದೆ. ರಾಯಣ್ಣ ಪ್ರತಿಮೆ ವಿಚಾರದಲ್ಲಿ ಜಿಲ್ಲೆಯ ಬಹುತೇಕ ಪ್ರತಿನಿಧಿಗಳು ಮೌನಕ್ಕೆ ಶರಣಾಗಿರುವುದು ಕೆಂಗಣ್ಣಿಗೆ ಗುರಿಯಾಗಿದೆ.

## ರಾಯಣ್ಣ ಪುತ್ಥಳಿಗೆ ಹಾಲಿನ ಅಭಿಷೇಕ

**ಬೆಳಗಾವಿ:** ಪೀರನವಾಡಿ ಗ್ರಾಮದ ವೃತ್ತದಲ್ಲಿ ಸಂಗೊಳ್ಳಿ ರಾಯಣ್ಣನ ಪುತ್ಥಳಿ ಪ್ರತಿಷ್ಠಾಪನೆ ಬಳಿಕ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿನ ರಾಯಣ್ಣನ ಪುತ್ಥಳಿಗೆ ಕನ್ನಡಪರ ಹೋರಾಟಗಾರ್ತಿ ಕಸ್ತೂರಿ ಭಾವಿ ಅವರ ನೇತೃತ್ವದಲ್ಲಿ ಹಾಲಿನ ಅಭಿಷೇಕ ಮಾಡಲಾಯಿತು.

ಪೀರನವಾಡಿಯಲ್ಲಿ ಸಂಗೊಳ್ಳಿ ರಾಯಣ್ಣನ ಪುತ್ಥಳಿ ಪ್ರತಿಷ್ಠಾಪನೆಗೆ ಹಲವಾರು ವರ್ಷಗಳಿಂದ ಬೇಡಿಕೆ ಇಟ್ಟುಕೊಂಡು ಬಂದಿದ್ದ ರಾಯಣ್ಣನ ಅಭಿಮಾನಿಗಳು ಈ ಬೇಡಿಕೆ ಈಡೇರಿದ ಹಿನ್ನೆಲೆಯಲ್ಲಿ ವಿಜಯೋತ್ಸವ ಆಚರಿಸಿದ್ದಾರೆ. ಈ ಸಂದರ್ಭದಲ್ಲಿ ಗಂಗಾಧರ ದೊಡಮನಿ, ಯುವರಾಜಕುಮಾರ ಅಷ್ಟೇಕರ, ಆನಂದ ಭೋಪಾಲಪುರ, ಪ್ರಭು ಕಾಕತಿಕರ ಸೇರಿದಂತೆ ಮೊದಲಾದವರು ಭಾಗವಹಿಸಿದ್ದರು.

## ರಾಯಣ್ಣ, ಶಿವಾಜಿ ದೇಶದ ಆಸ್ತಿ: ರಮೇಶ ಜಾರಕಿಹೊಳಿ

• **ಕನ್ನಡಪ್ರಭ ವಾರ್ತೆ** ಚಿಕ್ಕೋಡಿ

ಸಂಗೊಳ್ಳಿ ರಾಯಣ್ಣ, ಶಿವಾಜಿ ಮಹಾರಾಜರು ದೇಶದ ಆಸ್ತಿ. ಅವರು ಯಾವುದೇ ಜಾತಿಗೆ ಸೀಮಿತವಲ್ಲ. ಅಂತಹ ಮಹಾನ್ ನಾಯಕರಿಗೆ ಯಾವುದೇ ರೀತಿಯಿಂದ ಅಪಮಾನ ವಾಗದಂತೆ ವಿವಾದ ಸರಿಪಡಿಸಬೇಕಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ರಮೇಶ ಜಾರಕಿಹೋಳಿ ಹೇಳಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಪೀರನವಾಡಿಯಲ್ಲಿ ರಾಯಣ್ಣ ಪ್ರತಿಮೆ ಪ್ರತಿ



ಷ್ಠಾಪನೆ ಮಾಡಿದ ಬಗ್ಗೆ ವರದಿ ಇದೆ. ರಾಯಣ್ಣ ಅಭಿಮಾನಿಗಳ ಮೇಲೆ ಚಪ್ಪಲಿ ಎಸೆದಿರುವ ಘಟನೆ ಸುಳ್ಳು ಇರಬಹುದು. ಏಳೆಂಟು ಜನರ ಗುಂಪು ಬಂದಿದ್ದು ನಿಜ. ಆದರೆ ಪೊಲೀಸರು ಲಾಠಿ ಚಾರ್ಜ್ ಮಾಡಿ ಕಿಡಿಗೇಡಿಗಳನ್ನು ಚದುರಿಸಿದ್ದಾರೆ. ನನಗೂ ಘಟನೆ ಬಗ್ಗೆ ಪೂರ್ಣ ಮಾಹಿತಿ ಇಲ್ಲ ಎಂದರು. ಈ ಬಗ್ಗೆ ಡಿಸಿ, ಎಸ್‌ಪಿ ಅವರ ಜೊತೆ ಮಾತನಾಡಿ ಪ್ರತಿಕ್ರಿಯಿಸುವೆ ಎಂದ ಸಚಿವರು, ಪೊಲೀಸರು ಕಾನೂನು ರೀತಿ ಕ್ರಮ ಕೈಗೊಳ್ಳುತ್ತಾರೆ. ತಪ್ಪಿತಸ್ಥರಿಗೆ ಕಠಿಣ ಕ್ರಮ ಕೈಗೊಳ್ಳಲು ಸೂಚನೆ ನೀಡುತ್ತೇನೆ. ಸದ್ಯ ಪೀರನವಾಡಿ ಪರಿಸ್ಥಿತಿ ಹತೋಟಿಯಲ್ಲಿದೆ ಎಂದರು

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಸಚಿವ ರಮೇಶ, ಮುಖ್ಯಮಂತ್ರಿ ಯಡಿಯೂರಪ್ಪ ಬದಲಾವಣೆ ಊಹಾಪೋಹ. ಮುಂದಿನ ಮೂರು ವರ್ಷಗಳ ಕಾಲ ಯಡಿಯೂರಪ್ಪ ಅವರೇ ನಮ್ಮ ಸಿಎಂ. ಮುಂದಿನ ಚುನಾವಣೆಯನ್ನೂ ಯಡಿಯೂರಪ್ಪ ಅವರ ನೇತೃತ್ವದಲ್ಲಿ ಮಾಡಲು ನಾನು ಆಗ್ರಹ ಮಾಡುತ್ತೇನೆ. ಸಂಪುಟ ವಿಸ್ತರಣೆ ಕುರಿತು ಹೈ ಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ ಎಂದರು.

ಯುವನಾಯಕ ವಿಜಯೇಂದ್ರ ಪಕ್ಷ ಸಂಘಟನೆ ಕೆಲಸ ಮಾಡುತ್ತಿದ್ದಾರೆ. ವಿರೋಧಿಗಳು ಹತಾಶೆಯಿಂದ ಸುಳ್ಳು ಆರೋಪ ಮಾಡುತ್ತಿದ್ದಾರೆ. ವಿಜಯೇಂದ್ರ ಮೇಲೆ ಬಂದಿರುವ ಆರೋಪಗಳು ಎಲ್ಲ ಸುಳ್ಳು. ಆರೋಪ ಮಾಡುವರು ದಾಖಲೆಗಳಿದ್ದರೆ ಬಹಿರಂಗ ಪಡಿಸಲಿ ಎಂದು ಸವಾಲು ಎಸೆದರು. ಚಿಕ್ಕೋಡಿ ಸಂಸದ ಅಣ್ಣಾಸಾಹೇಬ ಜೊಲ್ಲೆ, ಹಿರಿಯ ಧುರೀಣ ಬಿ ಆರ್ ಸಂಗಪ್ಪಗೋಳ, ಪುರಸಭೆ ಸದಸ್ಯ ಶಾಮ ರೇವಡೆ ಮುಂತಾದವರು ಉಪಸ್ಥಿತರಿದ್ದರು.

### ಜೊಲ್ಲೆ-ಜಾರಕಿಹೊಳಿ ಗೌಪ್ಯ ಚರ್ಚೆ

ಜಿಲ್ಲಾ ಉಸ್ತುವಾರಿ ಸಚಿವ ರಮೇಶ ಜಾರಕಿಹೋಳಿ ಖಾಸಗಿ ಕೆಲಸದ ನಿಮಿತ್ತ ಶುಕ್ರವಾರ ಅಥಣಿಗೆ ಹೋಗುವಾಗ ಕೆಲಹೊತ್ತು ಚಿಕ್ಕೋಡಿಯ ಪ್ರವಾಸಿ ಮಂದಿರದಲ್ಲಿ ತಮ್ಮ ಆಪ್ತರ ಮತ್ತು ಅಧಿಕಾರಿಗಳ ಅಹವಾಲು ಸ್ವೀಕರಿಸಲು ನಿಂತಿದ್ದ ಸಮಯದಲ್ಲಿ ಸಂಸದ ಜೊಲ್ಲೆ ಆಗಮಿಸಿದರು. ಈ ಸಮಯದಲ್ಲಿ ಸಚಿವರ ಜೊತೆ ಇದ್ದ ಎಲ್ಲರನ್ನೂ ಕೆಲ ಸಮಯ ಹೊರಗೆ ಕಳುಹಿಸಿ ಗೌಪ್ಯ ಚರ್ಚೆ ಮಾಡಿದ್ದಾರೆ. ಇವರಿಬ್ಬರ ಗೌಪ್ಯ ಸಭೆ ಈಗ ಗಡಿ ಭಾಗದಲ್ಲಿ ಬಿಸಿ ಬಿಸಿ ಚರ್ಚೆಯಾಗುತ್ತಿದೆ.

### ಸರ್ಕಾರದ ಮಧ್ಯಪ್ರವೇಶಕ್ಕೆ ಶಾಸಕಿ ಹೆಬ್ಬಾಳಕರ ಆಗ್ರಹ

**ಧಾರವಾಡ:** ಬೆಳಗಾವಿ ಪೀರನವಾಡಿಯಲ್ಲಿ ಸಂಗೊಳ್ಳಿ ರಾಯಣ್ಣ ಪುತ್ಥಳಿ ಸ್ಥಾಪನೆ ಗಲಾಟೆ ವಿಚಾರದಲ್ಲಿ ಸರ್ಕಾರದ ಮಧ್ಯಪ್ರವೇಶಕ್ಕೆ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಆಗ್ರಹಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದು ಬಹಳಷ್ಟು ದುರದೃಷ್ಟಕರ ವಿಚಾರ. ಸಂಗೊಳ್ಳಿ ರಾಯಣ್ಣನ



ತ್ಯಾಗ, ಬಲಿದಾನ ದೊಡ್ಡದು. ಅಂತಹ ವೀರ ಒಂದು ಕಡೆ, ಈ ದೇಶ ಒಗ್ಗಟ್ಟಾಗಿ ಕಟ್ಟಿದ ಶಿವಾಜಿ ಮಹಾರಾಜರು ಇನ್ನೊಂದು ಕಡೆ. ಇವರಿಬ್ಬರೂ ದೇಶದ ಹೆಮ್ಮೆಯ ವಿಶ್ವಮಾನವರು. ಇಂಥವರ ವಿಷಯದಲ್ಲಿ ಪುತ್ಥಳಿ ರಾಜಕಾರಣ ಆಗಬಾರದು. ನಮ್ಮ ದೇಶಕ್ಕೆ ಇಬ್ಬರೂ ವೀರ ಪುತ್ರರಾಗಿದ್ದು ಸರ್ಕಾರ ಮಧ್ಯಪ್ರವೇಶಿಸಿ ಶಾಂತ ರೀತಿಯಿಂದ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ನಾನು ಎಂಇಎಸ್ ಬಗ್ಗೆ ಯಾವಾಗಲೂ ವಿರೋಧಿಸುತ್ತ ಬಂದಿದ್ದೇನೆ. ನಾವೆಲ್ಲ ಅವರ ಪುಂಡಾಡಿಕೆಗಳನ್ನು ಕಣ್ಣಾರೆ ಕಂಡಿದ್ದೇವೆ. ಅವರ ಕನ್ನಡ ವಿರೋಧ ಕೃತ್ಯಗಳನ್ನು ಖಂಡಿಸುತ್ತೇನೆ ಎಂದರು.


**ಬೇಕಾಗಿದ್ದಾರೆ**

ಬೀಳಗಿ, ಗಲಗಲಿ ಹಾಗು ಅಥಣಿ ಸುತ್ತಮುತ್ತಲಿನ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡಲು ಸೆಕ್ಯುರಿಟಿ ಸುಪರ್‌ವೈಜರ್, ಸೆಕ್ಯುರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. 8 ತಾಸಿನ ಡ್ಯೂಟಿ, ಆಕರ್ಷಕ ಸಂಬಳ, ಉಚಿತ ವಸತಿ, ಕ್ಯಾಂಟೀನ್ ಸೌಲಭ್ಯ ಇರುತ್ತದೆ.

ಕೂಡಲೇ ಸಂಪರ್ಕಿಸಿ

ಮೊ: 99452-18123
99019-48454


## ರಾಯಬಾಗ, ಬೈಲಹೊಂಗಲದಲ್ಲಿ ವಿಜಯೋತ್ಸವ ಆಚರಣೆ

• **ಕನ್ನಡಪ್ರಭ ವಾರ್ತೆ** ರಾಯಬಾಗ

ಗಡಿ ಜಿಲ್ಲೆ ಬೆಳಗಾವಿಯ ಪೀರನವಾಡಿಯಲ್ಲಿ ಮಧ್ಯರಾತ್ರಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ಸ್ಥಾಪನೆ ಮಾಡಿರುವ ಹಿನ್ನೆಲೆಯಲ್ಲಿ ಶುಕ್ರವಾರ ಪಟ್ಟಣದ ಝೇಂಡಾಕಟ್ಟೆ ಹತ್ತಿರ ರಾಯಣ್ಣ ಅಭಿಮಾನಿಗಳು ಮತ್ತು ಕರವೇ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಕರವೇ ತಾಲೂಕಾಧ್ಯಕ್ಷ ಅಶೋಕ ಅಂಗಡಿ ಮಾತನಾಡಿ, ಇನ್ನು ಮುಂದೆ ರಾಯಣ್ಣ ಪ್ರತಿಮೆಯನ್ನು ಯಾರಾದರೂ ಮುಟ್ಟಲು ಬಂದರೆ ಅಂತಹ ನಾಡವಿರೋಧಿಗಳ ವಿರುದ್ಧ ಉಗ್ರವಾಗಿ



ಹೋರಾಟ ಮಾಡುವುದಾಗಿ ಎಚ್ಚರಿಸಿದರು. ನಾರಾಯಣ ಮೇತ್ರಿ, ರಾಜು ಗಡ್ಡಿ, ರಾಜು ಕುಲಗುಡೆ, ಬಸವರಾಜ ಸವಸುದ್ದಿ, ಮಣಿಕಂಠ ನಾವಿ, ಕಿರಣ ನಾವಿ, ಮಹಾಂತೇಶ ಹಳಿಂಗಳಿ, ರಾಜು ಮಾಳಿ, ರಮೇಶ, ರಾಹುಲ ಉಪಸ್ಥಿತರಿದ್ದರು.

**ಬೈಲಹೊಂಗಲ:** ಬೆಳಗಾವಿಯ ಪೀರನವಾಡಿ ಗ್ರಾಮದಲ್ಲಿ ಕರವೇ ಕಾರ್ಯಕರ್ತರು ರಾಯಣ್ಣ ಮೂರ್ತಿ ಪ್ರತಿಷ್ಠಾಪನೆ ಮಾಡಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಕರವೇ ಕಾರ್ಯಕರ್ತರು ಬಸ್ ನಿಲ್ದಾಣದ ಎದುರು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು. ಕರವೇ ಜಿಲ್ಲಾ ಸಂಚಾಲಕ ಶಿವಾನಂದ ಕೋಲಕಾರ, ತಾಲೂಕಾಧ್ಯಕ್ಷ ವಿಠ್ಠಲ ಕಡಕೊಳ ಮಾತನಾಡಿದರು. ರಫೀಕ್ ಬಡೇಗರ, ವಿಠ್ಠಲ ಅಂದಾನಿ, ಶಿವು ಕುರಬೇಟ, ಅಭಿಷೇಕ ಬೊಳನ್ನವರ, ಮಲ್ಲಿಕಾರ್ಜುನ ಬಾ ಜಿ, ಬಸವರಾ ಜ ಜಂಬಗಿ, ಕಿರಣ ಇದ್ದರು.

## ಶಾಸಕ ಅಭಯಗೆ ಸೋಂಕು

**ಬೆಳಗಾವಿ:** ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಅಭಯ ಪಾಟೀಲಗೆ ಶುಕ್ರವಾರ ಕೊರೋನಾ ದೃಢವಾಗಿದ್ದು, ಆದರೆ ಅವರು ಆಸ್ಪತ್ರೆಗೆ ದಾಖಲಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಈಚೆಗೆ ಸಿಎಂ ಯಡಿಯೂರಪ್ಪ ಬೆಳಗಾವಿಯಲ್ಲಿ ಪ್ರವಾಹ ಕುರಿತಾದ ಸಭೆ ನಡೆಸಲು ಬೆಳಗಾವಿಗೆ ಆಗಮಿಸಿದ ಸಂದರ್ಭದಲ್ಲಿ ಶಾಸಕ ಪಾಟೀಲ ಕೂಡ ಪಾಲ್ಗೊಂಡಿದ್ದರು. ಅಲ್ಲದೆ, ಅವರು ಬಿಮ್ಸ್‌ಗೆ ಕೊಡಮಾಡಿದ ಆಕ್ಸಿಜನ್ ಉಪಕರಣವನ್ನು ಉದ್ಘಾಟನೆ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಸಿಎಂಗೆ ಕೂಡ ಮತ್ತೊಮ್ಮೆ ಭೀತಿ ಎದುರಾಗಿದೆ.